ಆಮೆಯ ಬೆನ್ನಮೇಲಿನ ಕವಚದಂತೆ ಡಾ. ಪ್ರಕಾಶ್ ಮೇಸ್ತ ತನ್ನ ಬೆನ್ನಿಗೂ ಒಂದು ದೊಡ್ಡ ಬ್ಯಾಕ್‌ಪ್ಯಾಕ್ ಹೊತ್ತು ಬಂದಿದ್ದರು. ಅದರಲ್ಲಿ ಆಮೆಗಳ ಕುರಿತಂತೆ ಮೂಟೆಗಟ್ಟಲೆ ದಾಖಲೆಗಳಿದ್ದವು. ಅವನ್ನೆಲ್ಲ ನಮಗೆ ತೋರಿಸುವ ತವಕ ಅವರಿಗೆ. ಆದರೆ ನಮಗೆ ಆಮೆಮರಿಗಳನ್ನು ನೋಡುವ ತವಕ.

"ಹೊರಡೋಣವಾ? ಇವನ್ನೆಲ್ಲ ಆಮೇಲೆ ನೋಡೋಣ" ಎಂದೆ.

"ಸೂರ್ಯ ಕಂತಿಲ್ಲ. ಆಮೆ ಗೂಡು ಈಗ ತಾನೇ ಉಬ್ಬುತ್ತಾ ಇದೆ; ಮರಿಗಳು ಇನ್ನೂ ಹೊರಬಂದಿಲ್ಲ; ಕತ್ತಲಾದ ನಂತರ ಹೋಗೋಣ" ಎಂದರು ಮೇಸ್ತ.

"ಏನದು, ಗೂಡು ಉಬ್ಬೋದು ಅಂದರೆ? ನಾವೂ ನೋಡಬಹುದಾ?"

"ಅಷ್ಟೆಲ್ಲ ಎದ್ದು ಕಾಣುವಷ್ಟು ಉಬ್ಬೋದಿಲ್ಲ; ಆದರೆ ಗೂಡುಗಳನ್ನು ಪದೆ ಪದೇ ನೋಡ್ತಾ ಇದ್ದವರಿಗೆ ಸೂಕ್ಷ್ಮವಾಗಿ ಅದು ಗೊತ್ತಾಗ್ತದೆ" ಎನ್ನುತ್ತ ಮೇಸ್ತರು ತಮ್ಮ ಊರಿನ ಮೀನುಗಾರ ಸಮುದಾಯಕ್ಕೆ ಹುಟ್ಟಿನಿಂದ ಬಂದ ಜಾಣ್ಮೆಯನ್ನು ವಿವರಿಸುತ್ತಾರೆ. ಅದರೊಂದಿಗೇ ಈ ಆಮೆಗಳ ಜಾಣ್ಮೆಯೂ ತಳಕು ಹಾಕಿಕೊಂಡ ಕಥನ ಹೊರಕ್ಕೆ ಬರುತ್ತದೆ.

ಹೊನ್ನಾವರದ ಕಾಸರಕೋಡು ಕಡಲತೀರದಲ್ಲಿ ಕಳೆದ ಜನವರಿ ಕೊನೇ ವಾರದ ಕತ್ತಲಲ್ಲಿ ಸಾಲು ಸಾಲಾಗಿ, ಒಂದೊಂದಾಗಿ ಸಮುದ್ರದಿಂದ ನೂರಾರು ಆಮೆಗಳು ಮೇಲೆದ್ದು ಬಂದಿದ್ದವು. ಅವು ಬಂದೇ ಬರುತ್ತವೆ ಎಂಬ ನಿರೀಕ್ಷೆ ಮೀನುಗಾರರೇ ತುಂಬಿರುವ ಇಲ್ಲಿನ 'ಟೊಂಕಾ' ಎಂಬ ಊರಿನ ಜನರಿಗೆ ಗೊತ್ತಿತ್ತು. ಜನ ತಮ್ಮ ನಿರೀಕ್ಷೆಯಲ್ಲಿರುತ್ತಾರೆ ಎಂಬುದು ಕಡಲಾಮೆಗಳಿಗೂ ಗೊತ್ತಿರುತ್ತದೇನೊ. ಅದಕ್ಕೇ ಕತ್ತಲಾದ ನಂತರವೇ ದಡಕ್ಕೆ ಬರುತ್ತವೆ.

ಈ ಆಮೆಗಳು 15–20 ವರ್ಷಗಳ ಹಿಂದೆ ಇಲ್ಲೇ ಹುಟ್ಟಿ ಸಮುದ್ರವನ್ನು ಹೊಕ್ಕಿದ್ದವಾದರೂ ಮತ್ತೆಂದೂ ಒಣ ಮರಳನ್ನು ಕಂಡಿದ್ದೇ ಇಲ್ಲ. ಹುಟ್ಟುವಾಗ ಬೆರಳುದ್ದ ಇದ್ದ ಅವು ಆಳ ಕಡಲಿನಲ್ಲಿ ಸಾವಿರಾರು ಕಿಲೊಮೀಟರ್ ಓಡಾಡುತ್ತ 40–45 ಕಿಲೊಗ್ರಾಮ್ ತೂಗುವಷ್ಟು ದೊಡ್ಡದಾಗಿ ಬುಟ್ಟಿಗಾತ್ರಕ್ಕೆ ಬೆಳೆದಿವೆ. ಈಗ ಮರಳಲ್ಲಿ ತೆವಳುವುದು ಭಾರೀ ಪ್ರಯಾಸದ ಕೆಲಸ. ಅದರಲ್ಲೂ ಅಲ್ಲೆಲ್ಲೋ ಗರ್ಭಧಾರಣೆ ಆದಮೇಲೆ ತೀರಕ್ಕೆ ಬಂದು ಮೊಟ್ಟೆ ಇಡುವವರೆಗೂ ಅವು ಆಹಾರ ಸೇವನೆ ಮಾಡಿರುವುದಿಲ್ಲ. ತೂಕ ಜಾಸ್ತಿ, ತಾಕತ್ತು ಕಡಿಮೆ. ಆದರೂ ಪ್ರಯಾಸದಿಂದ ಮರಳಲ್ಲಿ ನಿಧಾನಕ್ಕೆ ಹೊಟ್ಟೆ ಹೊಸೆಯುತ್ತ ಅತ್ತಿತ್ತ ನೋಡುತ್ತ ಅಂಕುಡೊಂಕಿನ ಹಾದಿ ನಿರ್ಮಿಸಿಕೊಳ್ಳುತ್ತ ಸೂಕ್ತ ಜಾಗಕ್ಕಾಗಿ ಹುಡುಕುತ್ತವೆ. ಗುಂಡಿ ತೋಡಲು ಆರಂಭಿಸುತ್ತವೆ.

"ಗರ್ಭಿಣಿ ಆಲಿವ್ ರಿಡ್ಲೆ ಆಮೆಗಳು ಹವಾಮಾನ ಮುನ್ಸೂಚನೆಯನ್ನೂ ಕೊಡುತ್ತವೆ ಅಂತ ಮೀನುಗಾರರು ನಂಬಿದ್ದಾರೆ. ಈ ವರ್ಷ ತುಸು ಬೇಗ ದಡಕ್ಕೆ ಬಂದಿವೆ. ಅಂದರೆ, ಮಳೆಗಾಲ ಕೂಡ ಬೇಗನೇ ಬರಬಹುದು" ಎನ್ನುತ್ತಾರೆ ಡಾ. ಮೇಸ್ತ. ಸಮುದ್ರದ ಒಳಗಿನಿಂದ ಅವಕ್ಕೆ ಆಕಾಶದ ವಿದ್ಯಮಾನ ಹೇಗೆ ಗೊತ್ತಾಗುತ್ತದೊ?

ಒಣ ಮರಳಲ್ಲಿ ಓಡಾಡುವುದು ನಮಗೂ ಕಷ್ಟ. ಅವಕ್ಕಂತೂ ನೂರು ಮೀಟರ್ ತೆವಳುತ್ತ ಬಂದು 50–60 ಸೆಂಟಿಮೀಟರ್ ಆಳದ ಗುಂಡಿ ತೋಡುವುದು ಸುಲಭ ಅಲ್ಲ. ಹಿಂಭಾಗದ ರೆಕ್ಕೆಯಿಂದ ಮರಳನ್ನು ಎತ್ತಿ



ಮೊಟ್ಟೆ ಇಡಲು ಗುಂಡಿ ತೋಡುತ್ತಿರುವ ಆಲಿವರ್ ರಿಡ್ಲೆ





ಕಡಲಾಮೆಗಳ ರಕ್ಷಣೆಯ ಮೇಷ್ಟ್ರು ಡಾ. ಪ್ರಕಾಶ್ ಮೇಸ್ತ